ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

13 ಜೂನ್ 2018

**ಮಾನ್ಯ ಶ್ರೀ ಕುಮಾರಸ್ವಾಮಿಯವರೇ,**

**ವಿಷಯ:** ಬೆಂಗಳೂರು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿಯ (ಬಿಎಂಪಿಸಿ) ಪುನರ್‌ರಚನೆ ಕುರಿತು.

ನಮ್ಮ ಬೆಂಗಳೂರಿಗೆ ಒಂದು ಸಮಗ್ರ ಮತ್ತುಶಾಸನಬದ್ಧನಗರಾಭಿವೃದ್ಧಿ ಯೋಜನೆಯು ಅತೀ ಶೀಘ್ರವಾಗಿ ಅಗತ್ಯವಿರುವ ಬಗ್ಗೆ ತಮಗೆ ಪತ್ರವನ್ನು ಬರೆಯುತ್ತಿದ್ದೇನೆ.

ತಮಗೆ ತಿಳಿದಿರುವಂತೆ ಸಂವಿಧಾನದ 74ನೇ ತಿದ್ದುಪಡಿಯು ಮೆಟ್ರೋಪಾಲಿಟನ್ ಪ್ಲಾನಿಂಗ್ ಕಮಿಟಿ (ಎಂಪಿಸಿ)ರಚಿಸಿ ಅದರ ಮೂಲಕ ನಮ್ಮ ನಗರ ಯೋಜನೆಯನ್ನು ತಯಾರಿಸಬೇಕೆಂದು ತಿಳಿಸುತ್ತದೆ. ಇದು ನಾಗರೀಕರನ್ನೊಳಗೊಂಡ, ಪಾರದರ್ಶಕ ಮತ್ತು ಸಾರ್ವಜನಿಕ ಸಮಾಲೋಚನೆಯೊಂದಿಗೆ ನಾಗರೀಕರರು ಮತ್ತು ನೆರೆಹೊರೆಗಳನ್ನು ಕೇಂದ್ರ ಬಿಂದುವಾಗಿಟ್ಟುಕೊಂಡ ಒಂದು ಸಮಗ್ರ ಯೋಜನೆಯನ್ನು ರಚಿಸಲು ಸ್ಥಾಪಿಸಲಾದ ಸಂಸ್ಥೆ.

ಎಂಪಿಸಿ ನಿಯಮಗಳಲ್ಲಿನ ಲೋಪಗಳ ಬಗ್ಗೆ ಮತ್ತು ಅವುಗಳನ್ನುಸರಿಪಡಿಸಲು 2013ನೇ ಇಸವಿಯಿಂದ ನಾನು ಒತ್ತಾಯ ಮಾಡುತ್ತಲೇ ಇದ್ದೇನೆ. ಈ ಬಗ್ಗೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳಿಗೂ ಅನೇಕ ಭಾರಿ ಪತ್ರಗಳನ್ನು ಬರೆದಿದ್ದೇನೆ. ಈ ಎಲ್ಲಾ ಪತ್ರಗಳನ್ನು ತಮ್ಮ ಅವಗಾಹನೆಗೆ ಲಗತ್ತಿಸಲಾಗಿದೆ.

ಈ ಹಿಂದಿನ ಸರ್ಕಾರವು ಸಭೆಯನ್ನು ಕರೆಯದೆ ಎಂಪಿಸಿಯನ್ನು ಕಡೆಗಣಿಸುವ ಪ್ರಯತ್ನ ಮಾಡಿತ್ತು.ನ್ಯಾಯಾಲಯದ ಮಧ್ಯಪ್ರವೇಶದಿಂದ ಮಾತ್ರಒತ್ತಾಯಪೂರ್ವಕವಾಗಿ ಸರ್ಕಾರ ಒಂದೆರಡು ಸಭೆ ಸೇರಿಸಿತ್ತು. ಅದೂ ಕೂಡ ಹಠಾತ್ ಆಗಿ ಮತ್ತು ನಾಮಕಾವಸ್ಥೆಯ ಸಭೆಗಳಾಗಿ ಯಾವುದೇ ನಿಶ್ಚಿತ ಕಾರ್ಯಕ್ರಮ ಪಟ್ಟಿ ಇಲ್ಲದೇ ಸಭೆಗಳು ನಡೆದಿದ್ದವು. ಸರ್ಕಾರವು ಅಸಂವಿಧಾನಿಕವಾಗಿ **"ಬೆಂಗಳೂರು ವಿಷನ್ ಗ್ರೂಫ್"** ರಚಿಸಿ ಎಂಪಿಸಿಯನ್ನೇ ಬುಡಮೇಲು ಮಾಡುವಂತೆ ಮಾಡಿತ್ತು. ಈ ವಿಷನ್ ಗ್ರೂಫ್ ನಲ್ಲೂ ನಾಗರೀಕ ಕ್ಷೇಮಾಭಿವೃದ್ಧಿ ಸಂಘ ಅಥವಾ ಗುಂಪುಗಳಿಗೆ ಪ್ರಾತಿನಿಧ್ಯ ನೀಡದೆಕೇವಲ ಪ್ರಭಾವಿಶಾಲಿ ಉದ್ಯಮಿಗಳನ್ನು ಕೂರಿಸಿದ್ದರು.

ಎಂಪಿಸಿಯ ಕಡೆಗಣನೆಯನ್ನು ಕಾನೂನು ಬಾಹಿರ ಎಂದು ನಾನು ಈ ಮೊದಲೇ ಎಚ್ಚರಿಸಿದ್ದೆ. ಮತ್ತು ಈ ಸಂಬಂಧ ಸರ್ಕಾರದ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿದೆ. ದಿನಾಂಕ 11-06-2018 ರಂದು ಘನ ಕರ್ನಾಟಕ ಉಚ್ಚನ್ಯಾಯಾಲಯವು ತನ್ನ ಆದೇಶದಲ್ಲಿ ಹೀಗೆ ತಿಳಿಸಿದೆ. "*ಹಿಂದಿನ ಸಂದರ್ಭಗಳನ್ನು ಈ ಪ್ರಕರಣವನ್ನು ವಿಚಾರಣೆಗೊಳಪಡಿಸುವಾಗ,ಸರ್ಕಾರದ ಆದೇಶ ಸಂಖ್ಯೆ No. UDD 356 MNJ 2005 (P), dated 04.01.2014 ರಂತೆ ಸಂವಿಧಾನದ ಪರಿಚ್ಛೇಧ 243ZE ಅನುಸಾರ ಸ್ಥಾಪಿತವಾದ ಎಂಪಿಸಿ ಇರುವಾಗ ವಿಷನ್ ಗ್ರೂಪ್ ಎಂಬ ಮತ್ತೊಂದು ಸಲಹಾ ಮಂಡಳಿ/ಸಂಸ್ಥೆಯನ್ನುರಚಿಸಿರುವುದರ ಬಗ್ಗೆಮಾನ್ಯ ಘನ ಕರ್ನಾಟಕ ಉಚ್ಚನ್ಯಾಯಾಲಯವು ತೀವ್ರ ಅಸಮಾಧಾನ ವ್ಯಕ್ತ ಪಡಿಸುತ್ತದೆ.*"



11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600 / ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते

ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಎಂಪಿಸಿಯನ್ನು ಕಡೆಗಣಿಸಿ ದುಂದು ವೆಚ್ಚದ ಮತ್ತು ಅನಾವಶ್ಯಕ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸುತ್ತಿದೆ ಎಂಬ ನನ್ನ ನಿಲುವನ್ನು ನಮ್ಮ ಬೆಂಗಳೂರು ಪ್ರತಿಷ್ಟಾನದ ಸಹಯೊಗದೊಂದಿಗೆನಾನು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ W.P. Nos. 31791-31792/2016 ತೀರ್ಪು (ಪ್ರತಿ ಲಗತ್ತಿಲಾಗಿದೆ– **ಅನುಬಂಧ** 1) ಸಮರ್ಥಿಸುತ್ತದೆ.

ಈ ಹಿಂದಿನ ಕಾಂಗ್ರೆಸ್ ಸರ್ಕಾರ ಭ್ರಷ್ಟ ಬಿಡಿಎ ಮೂಲಕ ಎಂಪಿಸಿಯನ್ನು ತರದೇ ಆರ್.ಎಂ.ಪಿಯನ್ನು ತರಲು ಪ್ರಯತ್ನ ಮಾಡಿತ್ತು ಮತ್ತು ಅದು ನ್ಯಾಯಾಲಯ ಮಧ್ಯ ಪ್ರವೇಶ ಮಾಡಿದರ ಪರಿಣಾಮವಾಗಿಸ್ಥಗಿತವಾಗಿತ್ತು.

ಹಾಗಾಗಿ, 2013 ರ ಕರಡು ನಿಯಮಗಳನ್ನು ಮಾಡುವ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ದಿನಾಂಕ 22 ನವೆಂಬರ್ 2013 ರಂದು ನಾನು ಬರೆದ ಪತ್ರದಂತೆ (ಪ್ರತಿ ಲಗತ್ತಿಲಾಗಿದೆ– **ಅನುಬಂಧ 2**)ಮತ್ತು ನಾಗರೀಕರು ನೀಡಿರುವಂತಹ ಶಿಫಾರಸ್ಸುಗಳಂತೆ ಎಂಪಿಸಿಯನ್ನು ಪುನರ್‌ರಚಿಸಬೇಕೆಂದು ಒತ್ತಾಯಿಸುತ್ತೇನೆ.

1) ನಾಗರೀಕರು ಮತ್ತು ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳಭಾಗವಹಿಸುವಿಕೆಯನ್ನು ಖಾತ್ರಿ ಪಡಿಸಲು ಎಂಪಿಸಿಯ ನಿಯಮಗಳನ್ನು ಪರಿಷ್ಕರಿಸಬೇಕು.ಕರಡು ಯೋಜನೆಯನ್ನು ಸಿದ್ಧಪಡಿಸುವಾಗ ಸರ್ಕಾರೇತರ ಸಂಸ್ಥೆಗಳು ಮತ್ತು ವೃತ್ತಿಪರ ಸಂಸ್ಥೆಗಳ ಸಲಹೆ ಪಡೆಯಬೇಕು ಎಂದು ನೆಪಮಾತ್ರ ಉಲ್ಲೇಖಿಸುವ ಮೂಲಕ ಪ್ರಸ್ತುತ ಸ್ಥಿತಿಯಲ್ಲಿ ಎಂಪಿಸಿ ಸಂವಿಧಾನದ 74ನೇ ತಿದ್ದುಪಡಿಯ ಮೂಲ ಆಶಯದಿಂದ ದೂರ ಸರಿದಿದೆ. ಪ್ರಸ್ತುತ ಎಂಪಿಸಿ ರಚನೆಯುಉತ್ತಮ ಯೋಜನೆ ಮತ್ತು ಅಭಿವೃದ್ಧಿಯ ಭರವಸೆಯನ್ನು ಈಡೇರಿಸಲು ಸಾಧ್ಯವಿಲ್ಲ.

2) ಪ್ರಸ್ತುತ ಎಂಪಿಸಿ ರಚನೆಯು ನಾಗರೀಕರ ನಿಜವಾದ ಮತ್ತು ಸಕ್ರಿಯ ಭಾಗವಹಿಸುವಿಕೆಗೆ ಅವಾಕಾಶ ನೀಡುವುದಿಲ್ಲ. ಅವರ ಭಾಗವಹಿಸುವಿಕೆ ಇಲ್ಲದೆ, ಎಂಪಿಸಿಯು ವಾರ್ಡ್ ಕಮಿಟಿಗಳಿಗೆ, ನಾಗರೀಕರಿಗೆ, ನಿವಾಸಿ ಕಲ್ಯಾಣ ಸಂಘಗಳಿಗೆ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಸಂವಿಧಾನದ 74ನೇ ತಿದ್ದುಪಡಿಯು ಉದ್ದೇಶಿಸಿರುವ ಪಾತ್ರವನ್ನು ಉಲ್ಲಂಘಿಸುತ್ತದೆ. ಇದೊಂದು ದೊಡ್ಡ ಲೋಪವಾಗಿದ್ದು, ಇದನ್ನು ಸರಿಪಡಿಸಬೇಕಿದೆ. ಐಟಿ– ಬಿಟಿ ಉದ್ಯಮದ ಪ್ರಭಾವಶಾಲಿ ವ್ಯಕ್ತಿಗಳಿಗೆ ಎಂಪಿಸಿಯಲ್ಲಿ ಪ್ರಾತಿನಿಧ್ಯ ನೀಡುವ ಬದಲಾಗಿ ಕನಿಷ್ಠ 2–3 ನಿವಾಸಿ ಕಲ್ಯಾಣ ಸಂಘಗಳಿಗೆ ಪ್ರಾತಿನಿಧ್ಯ ನೀಡಬೇಕೆಂದು ನಾನು ಒತ್ತಾಯಿಸುತ್ತೇನೆ.

   ನಗರ ಯೋಜನೆಯಲ್ಲಿ ನಾಗರೀಕರ ಸಕ್ರಿಯ ಭಾಗವಹಿಸುವಿಕೆಯನ್ನು ಖಾತ್ರಿ ಪಡಿಸಲು ಕಾರ್ಪೋರೇಟರ್‌ಗಳು ಅಧ್ಯಕ್ಷತೆ ವಹಿಸುವ ವಾರ್ಡ್ ಸಮಿತಿಗಳಲ್ಲಿ ಸ್ಥಳೀಯ ನಿವಾಸಿ ಕಲ್ಯಾಣ ಸಂಘಗಳಿಗೆ **ಕನಿಷ್ಠ ಶೇ. 50 ರಷ್ಟು ಪ್ರಾತಿನಿಧ್ಯ** ನೀಡುವಂತೆ ನಿಯಮಗಳನ್ನು ರೂಪಿಸಬೇಕೆಂದು ಒತ್ತಾಯಿಸುತ್ತೇನೆ.

3) ಉಳಿದಿರುವ ಎಂಪಿಸಿಯ 10 ಸದಸ್ಯರಲ್ಲಿ ನಗರ ಯೋಜನೆಯಲ್ಲಿ ಪರಿಣಿತಿ ಮತ್ತು ಅನುಭವ ಹೊಂದಿರುವ ಕನಿಷ್ಠ 2–3 ಸದಸ್ಯರು ಇರಬೇಕು. ಸ್ವಘೋಷಿತ ತಜ್ಞರ ಬದಲಾಗಿ, ನೈಜ ವಿದ್ಯಾರ್ಹತೆ ಮತ್ತು ನಗರ ಯೋಜನೆ ತಯಾರಿಕೆಯಲ್ಲಿ ಉತ್ತಮ ಸಾಧನೆಗೈದಿರುವ ತಜ್ಞರು ಇರಬೇಕು.

4) ಪ್ರಸ್ತುತ ನಿಯಮಗಳು ಮುಖ್ಯಮಂತ್ರಿಗಳು, ಸಂಸದರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಎಂಪಿಸಿಯಲ್ಲಿ ಪ್ರಾತಿನಿಧ್ಯ ಕಲ್ಪಿಸಿದೆ. ಆದರೆ, ಬೆಂಗಳೂರು ಮಹಾನಗರ ವಾಪ್ತಿಯನ್ನು ಪ್ರತಿನಿಧಿಸುವ ನಗರದ ಮಹಾಪೌರರನ್ನು ಹೊರಗಿಟ್ಟಿದೆ. ನಗರಾಡಳಿತದಲ್ಲಿ ನಿಜವಾದ ವಿಕೇಂದ್ರೀಕರಣ ಮತ್ತು ಸ್ವಾಯತ್ತತೆ ಜಾರಿಗೊಳಿಸಬೇಕಾದರೆ ಮಹಾಪೌರರಿಗೆ ಎಂಪಿಸಿಯಲ್ಲಿ ಸ್ಥಾನ ಕಲ್ಪಿಸಬೇಕು.

सत्यमेव जयते

5) ಬಿಎಂಆರ್‌ಡಿಎಗೆ ದಕ್ಷ ಅಧಿಕಾರಿಗಳನ್ನು ನೇಮಕ ಮಾಡಿದ ನಂತರ ಅದನ್ನು ಎಂಪಿಸಿಯ ಸಚಿವಾಲಯವನ್ನಾಗಿ ಮಾಡಬೇಕು.

6) ಎಂಪಿಸಿ ರಚನೆಯಾದ ನಂತರ ಕೂಡಲೇ ಸಭೆಯನ್ನು ಕರೆದು, ಆರ್.ಎಂ.ಪಿಯನ್ನು ಸಿದ್ಧಪಡಿಸುವ ಪ್ರಕ್ರಿಯೆಗೆ ಚಾಲನೆ ನೀಡಬೇಕು.

ಸಂವಿಧಾನದ 74ನೇ ತಿದ್ದುಪಡಿಯು ನಾಗರೀಕರ ಸಕ್ರಿಯ ಭಾಗವಹಿಸುವಿಕೆಯ ಮೂಲಕ ನಗರಗಳ ವಿಕೇಂದ್ರಿಕೃತ ಯೋಜನೆ ಮತ್ತು ಅಭಿವೃದ್ಧಿಯನ್ನು ಪ್ರತಿನಿಧಿಸುತ್ತದೆ. ನಗರದ ಅಭಿವೃದ್ಧಿ ಪಥವನ್ನು ನಿರ್ಧರಿಸುವಲ್ಲಿ ನಾಗರೀಕರ ಭಾಗವಹಿಸುವಿಕೆಯ ನಿರ್ಲಕ್ಷ್ಯ ಮತ್ತು ಅಪಾರದರ್ಶಕತೆ ನಮ್ಮ ನಗರಗಳ ಇಂದಿನ ಶೋಚನೀಯ ಪರಿಸ್ಥಿತಿಗೆ ನೇರ ಹೊಣೆಯಾಗಿದೆ.ನಮ್ಮ ನಗರಕ್ಕೆ ಅಭಿವೃದ್ಧಿಯ ಎಲ್ಲಾ ಅಂಶಗಳನ್ನು ಪರಿಗಣಿಸುವ ಒಂದು ಜವಾಬ್ದಾರಿಯುತ ಮತ್ತು ಪಾರದರ್ಶಕ ಯೋಜನಾ ಸಂಸ್ಥೆಯ ಅವಶ್ಯಕತೆ ಇದೆಯೇ ಹೊರತು, ಕೇವಲ ಕೆಲ ಉದ್ಯಮಗಳ ಹಿತಾಸಕ್ತಿಯನ್ನು ಕಾಪಾಡುವ ಸಂಸ್ಥೆಯಲ್ಲ.

ಎಂಪಿಸಿ ರಚನೆಯು ನಗರಾಡಳಿತದ ಸುಧಾರಣೆಯಲ್ಲಿ ಒಂದು ನಿರ್ಣಾಯಕ ಘಟ್ಟವಾಗಿದೆ. ನನ್ನ ಸಲಹೆಗಳನ್ನು ಮತ್ತು ಮನವಿಯನ್ನು ಪರಿಗಣಿಸುವ ಮೂಲಕ ಎಂಪಿಸಿಯ ಮೂಲ ಆಶಯವನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸುತ್ತೇನೆ. ಹಲವು ವರ್ಷಗಳಿಂದ ಆಗುತ್ತಿರುವ ನಮ್ಮ ನಗರದ ಅವನತಿ ಮತ್ತು ಶೋಷಣೆಯನ್ನು ತಡೆಗಟ್ಟಿ ನಮ್ಮ ಬೆಂಗಳೂರನ್ನುಕರ್ನಾಟಕದ ಬಂಡವಾಳ ಹೂಡಿಕೆ ಮತ್ತು ಪ್ರವಾಸೋದ್ಯಮದ ಹೆಬ್ಬಾಗಿಲಾಗಿ ಅಭಿವೃದ್ಧಿಗೊಳಿಸಲು ಇರುವ ಏಕೈಕ ಮಾರ್ಗ ಇದಾಗಿದೆ.

ನಮ್ಮ ಜನತೆ, ನಮ್ಮ ನಗರ ಮತ್ತು ನಮ್ಮ ರಾಜ್ಯ ಕಳೆದ 5 ವರ್ಷಗಳಲ್ಲಿ ಪಡೆದಂತಹ ಆಡಳಿತಕ್ಕಿಂತ ಉತ್ತಮ ಆಡಳಿತವನ್ನು ನಿರೀಕ್ಷಿಸುತ್ತದೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

ಅನುಬಂಧ 1 – ಮಾನ್ಯ ಉಚ್ಛ ನ್ಯಾಯಾಲಯದ ಆದೇಶ– ದಿನಾಂಕ – 11.06.2018

ಅನುಬಂಧ 2 – ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದ ಪತ್ರ, ದಿನಾಂಕ –22.11.2013

**ಶ್ರೀ ಹೆಚ್.ಡಿ.ಕುಮಾರಸ್ವಾಮಿ**
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು

ಪ್ರತಿ: **ಡಾ. ಜಿ. ಪರಮೇಶ್ವರ,** ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು